**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನೈದನೇ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ನಾಲ್ಕನೇ ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-45)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ನಾಲ್ಕನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94-ಸಿ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 94ಸಿ ಪ್ರಕರಣದಲ್ಲಿ "2012ನೇ ಜನವರಿ ಮೊದಲನೇ ದಿನಕ್ಕೆ" ಎಂಬ ಪದಗಳು ಹಾಗೂ ಅಂಕಿಗಳು ಬರುವ ಎರಡು ಕಡೆಗಳಲ್ಲಿ "2015ನೇ ಜನವರಿ ಮೊದಲನೇ ದಿನಕ್ಕೆ" ಎಂಬ ಪದಗಳನ್ನು ಹಾಗೂ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**3. 94-ಸಿಸಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 94-ಸಿಸಿ ಪ್ರಕರಣದಲ್ಲಿ "2012ನೇ ಜನವರಿ ಮೊದಲನೇ ದಿನಕ್ಕೆ" ಎಂಬ ಪದಗಳು ಹಾಗೂ ಅಂಕಿಗಳು ಬರುವ ಎರಡು ಕಡೆಗಳಲ್ಲಿ "2015ನೇ ಜನವರಿ ಮೊದಲನೇ ದಿನಕ್ಕೆ" ಎಂಬ ಪದಗಳನ್ನು ಹಾಗೂ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ಕಾರಿ ಭೂಮಿಗಳಲ್ಲಿ ಅನಧಿಕೃತವಾಗಿ ನಿರ್ಮಿಸಿದ ವಾಸದ ಮನೆಗಳ ಸಕ್ರಮಾತಿಗಾಗಿ ಕಟ್‌ಆಫ್ ದಿನಾಂಕವನ್ನು 2012ರ ಜನವರಿ ಮೊದಲ ದಿನದಿಂದ 2015ರ ಜನವರಿ ಮೊದಲ ದಿನಕ್ಕೆ ವಿಸ್ತರಿಸುವುದಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94ಸಿ ಮತ್ತು 94ಸಿಸಿ ಪ್ರಕರಣಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಸಕ್ರಮಕ್ಕಾಗಿ ಪ್ರಸ್ತಾಪಿಸಿರುವ ಭೂಮಿಗಳು ಸರ್ಕಾರಕ್ಕೆ ಸೇರಿದ್ದು ಮತ್ತು ಅವು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಇರುತ್ತವೆ. ಕರ್ನಾಟಕ ಭೂ ಕಂದಾಯ ನಿಯಮಗಳು, 1966ರಲ್ಲಿ ನಿಯಮಿಸಿದ ಔಪಚಾರಿಕ ಶುಲ್ಕವನ್ನು ಸಕ್ರಮಾತಿಯ ಸಮಯದಲ್ಲಿ ಅರ್ಜಿದಾರರಿಂದ ಸಂಗ್ರಹಿಸತಕ್ಕದ್ದು. ಅದರಂತೆ, ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಉದ್ಧೃತಭಾಗ**

XX XX XX

**94ಸಿ ಆಕ್ರಮಿತ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.–** ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ನಿಯಮಿಸಲಾದ ಪ್ರಾಧಿಕಾರಕ್ಕೆ, 2012ನೇ ಜನವರಿ ಮೊದಲನೇ ದಿನಕ್ಕೆ ಮುಂಚೆ, ಯಾವೊಬ್ಬ ವ್ಯಕ್ತಿಯು, ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆ ಮತ್ತು ಅಂಥ ಭೂಮಿಯ ಮೇಲೆ ವಾಸದ ಮನೆಯನ್ನು ಕಟ್ಟಿಕೊಂಡಿದ್ದಾನೆಂದು, ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಮನದಟ್ಟಾದಲ್ಲಿ, ಅದು ತಾನು ಸೂಕ್ತವೆಂದು ಭಾವಿಸುವಂತೆ, ಅಂಥ ವ್ಯಕ್ತಿಯು ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ಫೀಜಿನೊಂದಿಗಿನ ಅಂಥ ನಮೂನೆಯಲ್ಲಿ ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅಂಥ ವಿಧಾನದಲ್ಲಿ ಮತ್ತು ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಬೇಕಾದ ಮನೆಯು ಆವರಿಸಿದಷ್ಟು ಅಂಥ ಭೂಮಿಗೆ ಮಂಜೂರಾತಿಯನ್ನು ನೀಡಬಹುದು, ಎಂದರೆ:–

(i) 2012ನೇ ಜನವರಿ ಮೊದಲನೇ ದಿನಕ್ಕೆ ಮುಂಚೆ ವಾಸದ ಮನೆಯನ್ನು ನಿರ್ಮಿಸಿರುವುದಕ್ಕಾಗಿ ರುಜುವಾತನ್ನು ಅರ್ಜಿದಾರನು ಸಲ್ಲಿಸತಕ್ಕದ್ದು;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯದಲ್ಲಿನ ನಗರ ಪಾಲಿಕೆಗಳು, ಸಿಎಂಸಿಗಳು, ಟಿಎಂಸಿಗಳ ಅಧಿಕಾರ ವ್ಯಾಪ್ತಿಯ ಮಿತಿಗಳೊಳಗೆ ಬರುವ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಮೇಲೆ ಅನಧಿಕೃತವಾಗಿ ನಿರ್ಮಿಸಿದ ಯಾವುದೇ ಮನೆಯನ್ನು ಸಕ್ರಮಗೊಳಿಸತಕ್ಕದ್ದಲ್ಲ;

(iii) ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನಿಗೆ ಅರ್ಜಿಯನ್ನು ಸಲ್ಲಿಸಲಾದ ಭೂಮಿಯಲ್ಲಿ ನಗರ ಅಥವಾ ಗ್ರಾಮೀಣ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನವು ಇದ್ದಲ್ಲಿ ಆ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ;

(iv) ಯಾವೊಬ್ಬ ವ್ಯಕ್ತಿಯು, ತನ್ನ ಹೆಸರಿನಲ್ಲಿಯಾಗಲೀ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಿಯಾಗಲೀ ಒಂದಕ್ಕಿಂತ ಹೆಚ್ಚಿನ ವಾಸದ ಮನೆಗೆ, ಭೂಮಿಯ ಮಂಜೂರಾತಿಗೆ ಅರ್ಹನಾಗತಕ್ಕದ್ದಲ್ಲ;

XX XX XX

**94ಸಿಸಿ. ನಗರ ಪ್ರದೇಶದಲ್ಲಿನ ಆಕ್ರಮಿತ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.–** ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ನಿಯಮಿಸಲಾದ ಪ್ರಾಧಿಕಾರಕ್ಕೆ, ತಾನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ 2012ನೇ ಜನವರಿ ಮೊದಲನೇ ದಿನಕ್ಕೆ ಮೊದಲು, ಯಾವೊಬ್ಬ ವ್ಯಕ್ತಿಯು, ನಗರ ಪ್ರದೇಶದಲ್ಲಿನ ಸರ್ಕಾರಕ್ಕೆ ಸೇರಿದ ಯಾವುದೇ ಕಂದಾಯ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಮತ್ತು ಅಂಥ ಭೂಮಿಯ ಮೇಲೆ ವಾಸದ ಮನೆಯನ್ನು ನಿರ್ಮಿಸಿಕೊಂಡಿದ್ದಾನೆಂದು, ಮನದಟ್ಟಾದಲ್ಲಿ, ಅಂಥ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ಫೀಜಿನೊಂದಿಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡಿ ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ವಿಧಾನದಲ್ಲಿ ಹಾಗೂ ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಬೇಕಾದ ಮನೆಯು ಆವರಿಸಿದಷ್ಟು ಅಂಥ ಭೂಮಿ ಮಂಜೂರಾತಿಯನ್ನು ನೀಡಬಹುದು, ಎಂದರೆ:–

(i) ಅರ್ಜಿದಾರನು 2012ನೇ ಜನವರಿ ಮೊದಲನೇ ದಿನಕ್ಕೆ ಮೊದಲು ವಾಸದ ಮನೆಯನ್ನು ನಿರ್ಮಿಸಿರುವುದಕ್ಕಾಗಿ ರುಜುವಾತನ್ನು ಸಲ್ಲಿಸತಕ್ಕದ್ದು;

(ii) ವಾಸಿಸುವ ಮನೆಯಿಲ್ಲದ ಯಾವುದೇ ಭೂಮಿಯನ್ನು ಸಕ್ರಮಗೊಳಿಸತಕ್ಕದ್ದಲ್ಲ;

(iii) ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನಿಗೆ ಅರ್ಜಿಯನ್ನು ಸಲ್ಲಿಸಲಾದ ಭೂಮಿಯಲ್ಲಿ ನಗರ ಅಥವಾ ಗ್ರಾಮೀಣ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನವು ಇದ್ದಲ್ಲಿ ಆ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ;

(iv) ಯಾವೊಬ್ಬ ವ್ಯಕ್ತಿಯು, ತನ್ನ ಹೆಸರಿನಲ್ಲಿಯಾಗಲೀ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಿಯಾಗಲೀ ಒಂದಕ್ಕಿಂತ ಹೆಚ್ಚಿನ ವಾಸದ ಮನೆಗೆ, ಭೂಮಿಯ ಮಂಜೂರಾತಿಗೆ ಅರ್ಹನಾಗತಕ್ಕದ್ದಲ್ಲ;

XX XX XX

ಸರ್ಕಾರಿ ಮುದ್ರಣಾಲಯ, ಸುವರ್ಣಸೌಧ ಘಟಕ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 1000, 22ನೇ ನವೆಂಬರ್ 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**FIFTEENTH SESSION**

# THE KARNATAKA LAND REVENUE (FOURTH AMENDMENT) BILL, 2017
**(L.A. Bill No. 45 of 2017)**

A Bill further to amend the Karnataka Land Revenue Act, 1964.

Whereas, it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty eighth year of the Republic of India, as follows:-

**1. Short title and commencement.-** (1) This Act may be called the Karnataka Land Revenue (Fourth Amendment) Act, 2017.

(2) It shall come into force at once.

**2. Amendment of section 94-C.-** In the Karnataka Land Revenue Act, 1964 (Karnataka Act 12 of 1964) (hereinafter referred to as the Principal Act) in section 94C, for the words and figures "first day of January 2012" occurring in two places, the words and figures "first day of January 2015" shall be substituted.

**3. Amendment of section 94-CC.-** In Section 94CC of the Principal Act, for the words and figures "first day of January 2012" occurring in two places, the words and figures "first day of January 2015" shall be substituted.

## STATEMENT OF OBJECTIONS AND REASONS

It is considered necessary to amend the section 94C and 94CC of the Karnataka Land Revenue Act, 1964 (Karnataka Act 12 of 1964) for regularization of the un-authorised construction of dwelling houses on Government lands by extending the cut off date from first day of January 2012 to first day of January 2015.

Hence, the Bill.

## FINANCIAL MEMORANDUM

The lands proposed to be regularized belongs to the Government and are situated both in rural and urban areas. Nominal fee which is prescribed in the Karnataka Land Revenue Rules, 1966 shall be collected from the applicants at the time of regularization. As such, there is no extra expenditure involved in the proposed Legislative measure.

**KAGODU THIMMAPPA**
Minister for Revenue

**S. Murthy**
Secretary (I/c)
Karnataka Legislative Assembly

# ANNEXURE

## EXTRACT FROM THE KARNATAKA LAND REVENUE ACT, 1964 (KARNATAKA ACT 12 OF 1964)

XX XX XX

**94C. Grant of Land in case of construction of dwelling house in occupied land.-** Notwithstanding anything contained in this Act and except as hereinafter provided in this section, the prescribed authority, if satisfied after holding such enquiry as it deems fit that any person is in unauthorized occupation of any land belonging to Government and has constructed a dwelling house on such land, prior to first day of January 2012, may on an application made to it by such person within such period, in such form along with such fee and on payment of such amount, as may: be prescribed grant in such manner and subject to the following conditions and such other restrictions and conditions as may be prescribed, such land to the extent covered by the house to be specified in the order of grant, namely,-

(i) The applicant shall submit proof for having constructed the dwelling house prior to first day of January 2012;

(ii) No house built unauthorisedly on the land belonging to State Government shall be regularized which is coming under the jurisdictional limits of the Bruhat Bengaluru Mahanagara Palike, City Corporations CMCs, TMCs in the State;

(iii) No land shall be granted if the person who has applied for grant of such land or any member of his family owns any building or site within the urban or rural areas in which the land for which application is made is situated;

(iv) No person shall be eligible for grant of land for more than one dwelling house either in his name or in the name of any member of his family;

XX XX XX

**94CC. Grant of Land in case of construction of dwelling house in occupied land in urban area.-** Notwithstanding anything contained in this Act and except as hereinafter provided in this section, the prescribed authority, if satisfied after holding such enquiry as it deems fit that any person is in unauthorized occupation of any revenue land belonging to Government and has constructed a dwelling house on such land, prior to first day of January 2012, in an urban area may on an application made to it by such person within such period, in such form along with such fee and on payment of such amount, as may be prescribed grant in such manner and subject to the following conditions and such other restrictions and conditions as may be prescribed, such land to the extent covered by the house to be specified in the order of grant, namely,-

(i) The applicant shall submit proof for having constructed the dwelling house prior to first day of January 2012;

(ii) No vacant land without a dwelling house shall be regularized;

(iii) No land shall be granted if the person who has applied for grant of such land or any member of his family owns any building or site within the urban area in which the land for which application is made is situated;

(iv) No person shall be eligible for grant of land for more than one dwelling house either in his name or in the name of any member of his family;

XX XX XX

Suvarna Soudha Unit, Belgaum, 22nd November, 2017 P7, W.D., Copies 1000